ಅನೇಕ ತಲೆಮಾರುಗಳಿಂದ ಮೈಗೂಡಿಸಿಕೊಂಡಿರುವ ಆದರೆ ನಮ್ಮ ಗ್ರಾಹಕ ಮನಸ್ಥಿಗೆ ಪೂರ್ಣ ವಿರುದ್ಧ ದಿಕ್ಕಿನಲ್ಲಿರುವುದು. ಎರಡನ್ನೂ ಬಿಟ್ಟರೆ ಇರುವುದು ರೀಸೈಕಲ್. ಮರು ಉತ್ಪಾದನೆ ಸುಸ್ಥಿರವಾದ ಪದ್ಧತಿ ಎನ್ನುವುದು ಸ್ಪಷ್ಟವಾಗಿ ನಿರೂಪಗೊಂಡಿಲ್ಲ ಎಂದು ಮೊನಿಕಾ ವಾದಿಸುತ್ತಾರೆ. ಮರು ಉತ್ಪಾದನೆಗೆ ತ್ಯಾಜ್ಯ ವಸ್ತುಗಳನ್ನು ಸಿದ್ಧಪಡಿಸುವ ಪ್ರಕ್ರಿಯೆ ಎಷ್ಟು ಸುಸ್ಥಿರವಾದದ್ದು ಎನ್ನುವ ಪ್ರಶ್ನೆಯನ್ನು ನಾವು ಕೇಳಿಕೊಳ್ಳಬೇಕು. ಕಮ್ಮಿ ಬಳಕೆಯ ಮುನ್ನ ರೆಫ್ಯೂಸ್ (ನಿರಾಕರಿಸು) ಎನ್ನುವ ಮಾತನ್ನೂ ನಮ್ಮ ಕಾಲದಲ್ಲಿ ಕೇಳಿದ್ದೇವೆ. ಅದನ್ನು ಎಷ್ಟು ಪಾಲಿಸಲು ಸಾಧ್ಯ ಎನ್ನುವುದನ್ನು ಮಾರುಕಟ್ಟೆಯಲ್ಲಿ ಪರೀಕ್ಷಿಸಬಹುದು. ತರಕಾರಿ ಕೊಳ್ಳುವಾಗ ನಾವು ಕೆಟ್ಟ ಪ್ಲಾಸ್ಟಿಕ್ ಚೀಲವನ್ನು 'ಸಹಜವಾಗಿ' ಸ್ವೀಕರಿಸುವ ನಮ್ಮಿಂದಲೇ ಒಂದು ಒಳನೋಟ ಸಿಗುತ್ತದೆ.

ಇತಿಹಾಸದ ಬರವಣಿಗೆಯಲ್ಲಿ ನಮಗೆ ಹೆಚ್ಚಿನಂಶ ಅಂದಿನ ಕಾಲದ ಭವ್ಯತೆ ಮಾತ್ರ ಕಾಣುತ್ತದೆ. ಒಂದು ನಗರ, ಅದರ ಅವಶ್ಯಕತೆ, ಅರ್ಥವ್ಯವಸ್ಥೆ ಮತ್ತು ಅಲ್ಲಿ ವಾಸವಿರುವವರ ಸಹಜೀವನದ ಚಿತ್ರಣ ನಮಗೆ ಸಶಕ್ತವಾಗಿ ಸಿಗುತ್ತದೆ. ಆದರೆ ವಿರಾಮಕಾಲಕ್ಕೊಂದು ಚಟುವಟಿಕೆಯನ್ನು ಹುಡುಕುವ ಪ್ರವೃತ್ತಿಯೇ ನಮ್ಮನ್ನು ಹೆಚ್ಚು ಜನಸಾಂದ್ರತೆಯಿರುವೆಡೆಗೆ ಒಯ್ಯುತ್ತದೆ. ನಗರೀಕರಣದ ಆವಿಷ್ಕಾರಕ್ಕೂ ಮಾನವನ ಸಾಮಾಜಿಕ ಜೀವನ ವಿಕಸನಗೊಳ್ಳುವುದಕ್ಕೂ ಇರಬಹುದಾದ ಸಂಬಂಧವನ್ನು ಮೊನಿಕಾ ಸೂಕ್ಷ್ಮವಾಗಿ ಗ್ರಹಿಸುತ್ತಾರೆ.

ಈ ಪುಸ್ತಕ ಓದಿದಾಗ ಒಂದು ದೇಜಾವು ಭಾವನೆ ಬರುವುದರಲ್ಲಿ ಆಶ್ಚರ್ಯವಿಲ್ಲ. ನಾವು ಇಂದು ಯಾವುದೆಲ್ಲ ಸಮಸ್ಯೆಗಳನ್ನು ಎದುರಿಸುತ್ತಿದ್ದೇವೋ, ಅವೇ ಸಮಸ್ಯೆಗಳು ಅನೇಕ ಶತಮಾನಗಳಿಂದಲೂ ಇವೆ. ಮನುಕುಲದ ವಿಕಾಸ ಮತ್ತು ವಿಲಾಸದೊಂದಿಗೆ ನಗರೀಕರಣ ಬೆಸೆದು ನಿಂತಿದೆ. ಇದು ಏಕಮುಖವಾಗಿ ಸಾಗುತ್ತಿರುವ ಪ್ರಕ್ರಿಯೆ. ಈ ಏಕಮುಖ ಪ್ರಕ್ರಿಯೆಯನ್ನು ಬದಲಾಯಿಸುವುದು ಸಾಧ್ಯವಾಗುವ ಮಾತಲ್ಲ. ಮೂಲತಃ ಏಕಾಂಗಿಯಾಗಿರುತ್ತಿದ್ದ ಈ ಕುಲ ಈಗ ಏಕಾಂತವನ್ನರಸಿ ಹೋಗಬೇಕಾಗುವುದು ಪ್ರಯಾಸದ ಮಾತು. ಹತ್ತು ದಿನಗಳ ವಿಪಶ್ಯನ ಮಾಡಿ ಬರುವುದು, ವಾರಾಂತ್ಯದಲ್ಲಿ ಮೊಬೈಲನ್ನು ನೋಡದೇ 'ಮೊಬೈಲ್ ಡೀಟಾಕ್ಸ್' ಎನ್ನುವ ಪ್ರಕ್ರಿಯೆಯನ್ನರಸುತ್ತ ಹೋಗುವುದು – ಎರಡೂ ಕಷ್ಟದ ಮತ್ತು ವ್ಯಾಪಕವಾಗಿ ವಿಸ್ತರಿಸಿದ ಪ್ರಯೋಗಗಳು. ನಾವು ಸಹಜೀವನದ ಯಾವ ಹಂತಕ್ಕೆ ತಲುಪಿದ್ದೇವೆಂದರೆ, ಈಗ ಜನಸಂಪರ್ಕವಿಲ್ಲದೇ ಇರುವುದು ಕಷ್ಟ ಎನ್ನುವಂತಾಗಿದೆ. ಹೀಗಾಗಿ ಜನಸಾಂದ್ರತೆಯತ್ತ ಸಾಗುವ ನಗರೀಕರಣವೇ ಮಾರ್ಗವೆನ್ನುವುದರಲ್ಲಿ ಅನುಮಾನವಿಲ್ಲ. ಜನಸಂಖ್ಯೆ ಹೆಚ್ಚುತ್ತಿರುವಂತೆ ಗ್ರಾಮಾಂತರ ಪ್ರದೇಶಗಳೇ ನಗರೀಕರಣಗೊಳ್ಳಬಹುದು. ಇಲ್ಲ ಜನ ಗುಳೆ ಹೋಗಿ ನಗರಗಳನ್ನು ಕಟ್ಟಬಹುದು.

ಒಂದು ನಗರವನ್ನು ವ್ಯಾಖ್ಯಾನಿಸಲು ಮೊನಿಕಾ ವಿವಿಧ ಮಾಪನಗಳನ್ನು ಉಪಯೋಗಿಸಿದ್ದರು. ಹಿಂದೆ ಒಂದು ದೇಶದ ಕರೆನ್ಸಿಯ ಕಿಮ್ಮತ್ತನ್ನು ಮತ್ತೊಂದರ ಜೊತೆ ಅಳೆಯಲು ಮೆಕ್‌ಡೊನಾಲ್ಡ್ ಬರ್ಗರ್ ಬೆಲೆಯನ್ನು ಮಾಪನವಾಗಿ ಉಪಯೋಗಿಸುತ್ತಿದ್ದರು. ಹಾಗೇ ಭಾರತದ ಸಂದರ್ಭಕ್ಕೆ ಒಂದು ನಗರದ ಪರಿಭಾಷೆ ಏನಿರಬಹುದು? ನಾನು ಲಘುವಾಗಿ ಈ ಮಾತನ್ನು ಹೇಳುತ್ತೇನೆ. ವ್ಯಾಪಕವಾಗಿ ಹಬ್ಬುತ್ತಿರುವ ಫ್ಯಾಬ್ ಇಂಡಿಯಾ ಅಂಗಡಿಗಳು, ಡಿಪಿಎಸ್ ಶಾಲೆಗಳು, ಕೇಂದ್ರೀಯ ವಿಶ್ವವಿದ್ಯಾಲಯಗಳು, ಐಐಟಿ, ಐಐಎಂಗಳಲ್ಲಿ ಯಾವೊಂದಾದರೂ ಇದ್ದರೆ ನಿಮ್ಮ ಊರು ದೊಡ್ಡನಗರವೆಂದು ಭಾವಿಸಬೇಕು. ದೇಸಿ ಎನ್ನಿಸುವಂತಹ ತುಟ್ಟಿ ಬಟ್ಟೆಯಂಗಡಿಯಲ್ಲಿ ದಿರಿಸುಗಳನ್ನು ಕೊಂಡು ಬಿಮ್ಮಿನಿಂದ ಓಡಾಡಬೇಕಾದರೆ, ದೊಡ್ಡ ದೆಹಲಿಯ ಶಾಲೆಯಲ್ಲಿ ಮಕ್ಕಳನ್ನು ಹಾಕಬೇಕಿದ್ದರೆ, ಅಥವಾ ಉನ್ನತ ವಿದ್ಯೆಗಾಗಿ ವಿಶಿಷ್ಟ ಜಾಗಗಳು ಏರ್ಪಾಟಾಗಿರಬೇಕಿದ್ದರೆ ಆ ಜಾಗ ಒಂದು ನಗರದ ಎಲ್ಲ ಲಕ್ಷಣಗಳನ್ನೂ ಹೊಂದಿರಬಹುದು. ಲಘುವಾಗಿ ಈ ಮಾಪನವನ್ನು ಉಪಯೋಗಿಸಬಹುದಾದರೂ, ಈ ಮುಂದೆ ಆಗಬಹುದಾದ ಜನಗಣತಿಯಲ್ಲಿ ನಮ್ಮ ನಗರೀಕರಣದ ಪ್ರಮಾಣ ನಮಗೆ ತಿಳಿದು ಬರುತ್ತದೆ. ಕೋವಿಡ್ ಬಂತು. ವರ್ಕ್ ಫ್ರಂ ಹೋಮ್ ಬಂತು. ಎಲ್ಲರನ್ನೂ ತಮ್ಮ ಮನೆಗಳಲ್ಲಿ ದೀರ್ಘಕಾಲ ಬಂಧಿಸಿಟ್ಟದ್ದಾಯಿತು. ಆದರೆ ಈಗ ಎಲ್ಲವೂ ಎಂದಿನಂತೆ ವಾಪಸ್ಸಾಗಿದೆ. ತಿರಮಲೇಶರು ಆಬೀಡ್ಸಿನಲ್ಲಿ ರಸ್ತೆ ದಾಟಿದಂತೆ ನಮ್ಮ ನಾಯಿಯ ಬಾಲ. ●